**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ.1511–2017**

| | | |
|---|---|---|
| ಹೆಸರು | ಜಯಸುಧಾ | ಪ್ರಾ.ಸಾ.1 |
| ಸಾ.ಪ್ರ.ವ.ಬೋದಿ:10–05–2019 | | |

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ–**

ನಾನು 2010 ರಿಂದ 2015ರವರೆಗೆ ಬೇಕರಿ ಉದ್ಯೋಗ ಮಾಡುತ್ತಿದ್ದೇ. ಅದು ಹೊಸಕೋಟೆಯ ಗಂಗಮ್ಮ ಗುಡಿ ಹತ್ತಿರ ಇತ್ತು. ಮನೆ ಲೀಸ್ ಮೇಲೆ ಮತ್ತು ಬೇಕರಿ ಬಾಡಿಗೆ ಮೇಲೆ ತೆಗೆದುಕೊಂಡಿದ್ದೇ. ನನ್ನ ಗಂಡನಿಗೆ ಕಣ್ಣು ಕಾಣದೇ ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಕಣ್ಣು ಕಾಣುವುದಿಲ್ಲ ಎಂದರೆ ಸರಿ. ಗಂಗಮ್ಮ ಗುಡಿ ರಸ್ತೆಯಲ್ಲಿಯೇ ಮನೆ ಮತ್ತು ಬೇಕರಿ ಇದ್ದವು ಎಂದರೆ ಸರಿ. 2015ರಲ್ಲಿ ಬೇಕರಿಯನ್ನು ಮಾರಾಟ ಮಾಡಿರುತ್ತೇನೆ. ಆ ಕುರಿತು ದಾಖಲೆಗಳನ್ನು ಹಾಕಿಲ್ಲ. ನಮಗೆ ಎಷ್ಟು ವ್ಯಾಪಾರ ಆಗುತ್ತಿತ್ತು, ಎಷ್ಟು ಆದಾಯ ಇತ್ತು ಎನ್ನುವ ಬಗ್ಗೆ ದಾಖಲೆ ಹಾಕಿಲ್ಲ ಎಂದರೆ ಸರಿ.

ಸತೀಶ್ ಎಂಬುವವರು ನನಗೆ 2010ರಿಂದ ಪರಿಚಯವಿರುತ್ತದೆ. ಅವರು ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಕೂಡ ಬೊಂಬೇನಹಳ್ಳಿಯವರು ಎಂದರೆ ಸರಿ. ಅವರು ಆರೋಪಿಯ ಇನೋವಾ ಕಾರಿನ ಚಾಲಕನಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಅವರ ಸ್ನೇಹಿತರಾಗಿದ್ದ ಬಗ್ಗೆ ಗೊತ್ತು ಎಂದು ಹೇಳಿರುತ್ತಾರೆ. ಆರೋಪಿ ಬೊಂಬೇನಹಳ್ಳಿ ಪಂಚಾಯ್ತಿ ಸದಸ್ಯರು ಎಂದರೆ ಸರಿ. ಆರೋಪಿ ಚುನಾವಣೆಗೆ ನಿಂತಾಗ ನಾನು ಕೂಡ ಇನೋವಾ ವಾಹನದಲ್ಲಿ ಪ್ರಚಾರಕ್ಕೆ ಹೋಗುತ್ತಿದ್ದೇ ಎಂದರೆ ಸರಿಯಲ್ಲ. ಸತೀಶ್ ರವರು ನನ್ನನ್ನು ಹಾಗೂ ಇತರೆ ಮಹಿಳೆಯರನ್ನು ಕರೆದುಕೊಂಡು ಚುನಾವಣಾ ಪ್ರಚಾರಕ್ಕೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. 2015–16ನೇ ಸಾಲಿನಲ್ಲಿ ಆರೋಪಿ ಚುನಾವಣೆಯಲ್ಲಿ ಗೆದ್ದಿದ್ದರು ಎಂದರೆ ಸರಿ.

ಚುನಾವಣಾ ಸಮಯದಲ್ಲಿ ಆರೋಪಿಯ ಕಾರಿನಿಂದ ನಾನು ಮತ್ತು ಸತೀಶ್ ಖಾಲಿ ಚೆಕ್ಕನ್ನು ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ಚೆಕ್ಕಿನಲ್ಲಿರುವ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ. ನಿಪಿ.1ರ ಚೆಕ್ಕಿನಲ್ಲಿ ಬರೆದ ಬರಹ ಆರೋಪಿಯದಲ್ಲ ಎಂದರೆ ಸರಿಯಲ್ಲ. ನಿಪಿ.1ರಲ್ಲಿ ಬರೆದ ಬರಹ ನನ್ನದಲ್ಲ ಎಂದರೆ ಸರಿ. ಆರೋಪಿ ಯಾವುದೇ ಚೆಕ್ಕು ಬರೆದು ಕೊಡದೇ ಇದ್ದರೂ ಸತೀಶ್ ಎಂಬುವವರ ಜೊತೆ ನಾನು ಶ್ಯಾಮಿಲಾಗಿ ನಾವೇ ಚೆಕ್ಕನ್ನು ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸತೀಶ್ ರವರು ಆರೋಪಿಯೊಂದಿಗೆ ಹಣದ ವಿಚಾರವಾಗಿ ಜಗಳವಾಗಿ ಮಾತುಬಿಟ್ಟಿರುತ್ತಾರೆ. ಆದರೇ ಅವರು ಆರೋಪಿಯ ಚಾಲಕನಲ್ಲ. ಸದರಿ ಸತೀಶ್ ಆರೋಪಿಯ ಚಾಲಕನಾಗಿದ್ದು, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹತ್ತೀರ ಎಂಟು ಲಕ್ಷ ಹಣ ಇದ್ದ ಬಗ್ಗೆ ದಾಖಲೆಗಳು ಇದೇ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದ ಅವುಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾರೆ. ನಿಪಿ.1 ಚೆಕ್ಕನ್ನು ಸತೀಶನೊಂದಿಗೆ ಶ್ಯಾಮಿಲಾಗಿ ಆರೋಪಿಯಿಂದ ಹಣ ವಸೂಲಿ ಮಾಡಬೇಕೆಂದು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ಬಗ್ಗೆ ವೈಯಕ್ತಿಕವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.